# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ


ವಿದ್ಯಾಸಂಗಮ, ಬೆಳಗಾವಿ–591 156.

**ನ್ಯಾಕ್ ಮಾನ್ಯತೆ ಬಿ+ ಗ್ರೇಡ್- 2021**

**web site**: www.rcub.ac.in  ದೂರವಾಣಿ ಸಂಖ್ಯೆ: 0831-2565208, 2565219  **E-mail:** cdc@rcub.ac.in


ಕ್ರಮ ಸಂ. ರಾಚವಿ/ಬೆಳಗಾವಿ/ಸಿ.ಡಿ.ಸಿ(ಸಂಯೋಜನೆ)/2022–23/17 ದಿನಾಂಕ: 28–04–2022

## ಅಧಿಸೂಚನೆ ಪ್ರಕಟಣೆ

**ವಿಷಯ: 2022–23ನೇ ಶೈಕ್ಷಣಿಕ ಸಾಲಿಗಾಗಿ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸಗಳಿಗೆ ವಿವಿಧ ಬಗೆಯ ಸಂಯೋಜನೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಕುರಿತು.**

**ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 27–04–2022.**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಯೋಜನೆ ಮೂಲಕ ವಿಶ್ವವಿದ್ಯಾಲಯವು ಪಠ್ಯಕ್ರಮ ರಚಿಸಿರುವ ಹಾಗೂ ಶುಲ್ಕಗಳನ್ನು ನಿಗದಿಪಡಿಸಿರುವ ಕೋರ್ಸಗಳೊಂದಿಗೆ ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳಲ್ಲಿ 2022–23ನೇ ಸಾಲಿಗೆ ಹೊಸ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಇಚ್ಛಿಸುವ ಸರ್ಕಾರದ ನಿಯಮಾವಳಿಯಂತೆ ನೋಂದಾಯಿಸಲ್ಪಟ್ಟ ಸಂಘ ಸಂಸ್ಥೆ/ ಟ್ರಸ್ಟ್‌ಗಳಿಂದ ಮತ್ತು 2021–22ನೇ ಸಾಲಿನಲ್ಲಿ ತಾತ್ಕಾಲಿಕ ಸಂಯೋಜನೆ ಹೊಂದಿರುವ ಹಾಗೂ 2021–22ನೇ ಸಾಲಿಗೆ ಶಾಶ್ವತ ಸಂಯೋಜನೆ ಕೊನೆಗೊಳ್ಳುವ ಪ್ರಸ್ತುತವಿರುವ ಮಹಾವಿದ್ಯಾಲಯಗಳಿಂದ ಬಿ.ಎ./ ಬಿ.ಎಸ್ಸಿ./ ಬಿ.ಕಾಂ./ ಬಿ.ಸಿ.ಎ./ ಬಿ.ಬಿ.ಎ./ ಬಿ.ಎಸ್.ಡಬ್ಲ್ಯೂ./ ಬಿ.ಇಡಿ./ ಬಿ.ಪಿ.ಇಡಿ./ ಎಂ.ಎ./ ಎಂ.ಕಾಂ./ ಎಂ.ಎಸ್ಸಿ./ ಎಂ.ಇಡಿ./ ಎಂ.ಪಿ.ಇಡಿ./ ಎಂ.ಎಸ್.ಡಬ್ಲ್ಯೂ. ಹಾಗೂ ಸರ್ಟಿಫಿಕೇಟ್ ಕೋರ್ಸ/ ಪಿ.ಜಿ. ಡಿಪ್ಲೋಮಾ ಇತ್ಯಾದಿ ಸ್ನಾತಕ/ ಸ್ನಾತಕೋತ್ತರ ಕೋರ್ಸಗಳಿಗೆ ಮುಂದುವರಿಕೆ/ ವಿಸ್ತರಣೆ/ ಹೊಸ ಕೋರ್ಸ/ ಹೊಸ ವಿಷಯ/ ಪ್ರವೇಶ ಮಿತಿ ಹೆಚ್ಚಳ/ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ನವೀಕರಣ ಸೇರಿದಂತೆ ಇತ್ಯಾದಿ ಸಂಯೋಜನೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಮುಂದುವರೆದು, ಮಹಾವಿದ್ಯಾಲಯಗಳ ಹೆಸರು ಬದಲಾವಣೆ, ಮಹಾವಿದ್ಯಾಲಯ ಸ್ಥಗಿತಗೊಳಿಸಲು, ಮಹಾವಿದ್ಯಾಲಯಗಳ ಆಡಳಿತ ಮಂಡಳಿಗಳ ವರ್ಗವಣೆ, ಮಹಾವಿದ್ಯಾಲಯದ ಸ್ಥಳಾಂತರ ಇತ್ಯಾದಿಗಳನ್ನು ಮಾಡಬಯಸುವುದಕ್ಕೆ ಸಂಬಂಧಿಸಿದ ದಾಖಲೆಗಳೊಂದಿಗೆ ಸಂಬಂಧಿತ ಶುಲ್ಕ ಮತ್ತು ಕ್ರೀಡಾ ಶುಲ್ಕ ರೂ.1,000/–ಗಳನ್ನು ಪಾವತಿಸಿ, ಕರ್ನಾಟಕ ಸರ್ಕಾರದ ಸಂಯೋಜನೆ ಸಂಬಂಧಿತ ವೆಬ್‌ಸೈಟ್ ವಿಳಾಸ: **https://www.onlineaffiliation.karnataka.gov.in/Affiliation22_23/** ರ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಯಾವುದೇ ಮಹಾವಿದ್ಯಾಲಯದವರು ಸ್ನಾತಕ ಕೋರ್ಸ ಪ್ರಾರಂಭಿಸಿ ಕನಿಷ್ಠ ಐದು ವರ್ಷಗಳನ್ನು ಪೂರ್ಣಗೊಳಿಸಿದ್ದಲ್ಲಿ ಅಂತಹ ಮಹಾವಿದ್ಯಾಲಯದವರು ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಬಹುದಾಗಿದೆ ಮತ್ತು ಎಂ.ಬಿ.ಎ./ ಎಂ.ಸಿ.ಎ./ ಬಿ.ಇಡಿ/ ಬಿ.ಪಿ.ಇಡಿ/ ಎಂ.ಇಡಿ./ ಎಂ.ಪಿ.ಇಡಿ. ಇಂತಹ ಕೋರ್ಸ ಪ್ರಾರಂಭಿಸಲು ಎ.ಐ.ಸಿ.ಟಿ.ಇ./ ಎನ್.ಸಿ.ಟಿ.ಇ. ಅಥವಾ ಅಂತಹ ಸಕ್ಷಮ ಪ್ರಾಧಿಕಾರದಿಂದ ಕಡ್ಡಾಯವಾಗಿ ಮಾನ್ಯತೆಯನ್ನು ಪಡೆದುಕೊಂಡಿರಬೇಕು. ಸಂಯೋಜನೆಗೆ ಸಂಬಂಧಿಸಿದ ಶುಲ್ಕಗಳ ವಿವರ ಮತ್ತು ಇನ್ನಿತರ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ ವಿಳಾಸ: www.rcub.ac.in ದಲ್ಲಿ CDC Link ನಲ್ಲಿ Affiliation Notification-2022-23ನ್ನು ನೋಡಬಹುದಾಗಿದೆ. **ಹೊಸ ಸಂಶೋಧನಾ ಕೇಂದ್ರದ ಮಾನ್ಯತೆಗಾಗಿ ಅರ್ಹ ಮಹಾವಿದ್ಯಾಲಯಗಳು ಹಾಗೂ 2021–22ನೇ ಸಾಲಿಗೆ ಮಾನ್ಯತೆ ಕೊನೆಗೊಳ್ಳುವ ಸಂಶೋಧನಾ ಕೇಂದ್ರಗಳ ಮಾನ್ಯತೆ ನವೀಕರಣಕ್ಕಾಗಿ ಅರ್ಜಿಗಳನ್ನು ಭೌತಿಕರೂಪದಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿಯ ದೂರವಾಣಿ ಸಂಖ್ಯೆ: 0831–2565219, 208 ಕ್ಕೆ ಸಂಪರ್ಕಿಸಬಹುದಾಗಿದೆ.**

| **ಆನ್‌ಲೈನ್ ಮೂಲಕ ಸಂಯೋಜನಾ ಅರ್ಜಿ ಸಲ್ಲಿಸುವುದಕ್ಕಾಗಿ ನಿಗದಿಪಡಿಸಲಾದ ದಿನಾಂಕಗಳು** | | |
|---|---|---|
| 1 | ಸಂಯೋಜನಾ ಅರ್ಜಿ ಸಲ್ಲಿಸಲು ದಂಡ ರಹಿತ ಶುಲ್ಕದೊಂದಿಗೆ ಕೊನೆಯ ದಿನಾಂಕ | **10.05.2022 ಸಂಜೆ 5.00ರ ಒಳಗಾಗಿ** |
| 2 | ಸಂಯೋಜನಾ ಅರ್ಜಿ ಸಲ್ಲಿಸಲು ರೂ.10,000/– ದಂಡ ಶುಲ್ಕದೊಂದಿಗೆ ಕೊನೆಯ ದಿನಾಂಕ | **14.05.2022 ಸಂಜೆ 5.00ರ ಒಳಗೆ** |
| 3 | ಸಂಯೋಜನಾ ಅರ್ಜಿ ಸಲ್ಲಿಸಲು ರೂ.10,000/– ಮತ್ತು ಪ್ರತಿ ದಿನ ರೂ.1,200/– ರಂತೆ ದಂಡ ಶುಲ್ಕದೊಂದಿಗೆ ದಿನಾಂಕ | **20.05.2022 ಸಂಜೆ 5.00ರ ಒಳಗೆ** |
| **ವಿಶೇಷ ಸೂಚನೆ: ದಿನಾಂಕ: 20.05.2022ರ ನಂತರ ಸಲ್ಲಿಸುವ ಯಾವುದೇ ಸಂಯೋಜನಾ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.** | | |

| | |
|---|---|
| **ಸಹಿ/–**<br>**ಪ್ರೊ. ಎಸ್.ಎಂ. ಗಂಗಾಧರಯ್ಯ**<br>ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ | **ಸಹಿ/–**<br>**ಪ್ರೊ. ಬಸವರಾಜ ಪದ್ಮಶಾಲಿ**<br>ಕುಲಸಚಿವರು |